ಅಂದಾಜಿಸಿದ. ಆ ಕೋಲನ್ನು ಹೇಗಾದರೂ ಮಾಡಿ ತೆಗೆದುಕೊಳ್ಳಬೇಕು ಎಂದುಕೊಂಡ. ಭಿಕ್ಷುಕ ಗಾಢವಾಗಿ ನಿದ್ದೆ ಮಾಡುವಾಗ ಆ ಕೋಲನ್ನು ತೆಗೆದುಕೊಂಡು ಬೇರೆ ಊರಿನ ಕಡೆಗೆ ಓಡಿದ.

ವ್ಯಾಪಾರಿಯೊಬ್ಬ ಸೋಮ ಸಾಗುತ್ತಿರುವ ಮಾರ್ಗವಾಗಿ ತನ್ನ ಅಂಗಡಿಗೆ ಸರಕುಗಳನ್ನು ಕೊಳ್ಳಲು ಪಕ್ಕದ ಊರಿಗೆ ಹೊರಟಿದ್ದ. ಅವನ ಬಳಿ ಹಣದ ಚೀಲ ಇರುವುದು ಸೋಮನಿಗೆ ತಿಳಿಯಿತು. ಅದು ನಿರ್ಜನ ಪ್ರದೇಶವಾಗಿದ್ದರಿಂದ ಸೋಮ ವ್ಯಾಪಾರಿಯನ್ನು ಅಡ್ಡಗಟ್ಟಿ, 'ನಿನ್ನ ಹತ್ತಿರವಿರುವ ಹಣವನ್ನು ನನಗೆ ಕೊಟ್ಟುಬಿಡು' ಎಂದು ಗದರಿಸಿದ. ವ್ಯಾಪಾರಿಯು ಸೋಮನ ಮಾತಿಗೆ ಹೆದರಲಿಲ್ಲ. ಕೋಪಗೊಂಡ ಸೋಮ ತನ್ನ ಕೈಯಲ್ಲಿದ್ದ ಕೋಲಿನಿಂದ ಬಲವಾಗಿ ವ್ಯಾಪಾರಿಯ ತಲೆಗೆ ಹೊಡೆದ. ವ್ಯಾಪಾರಿ ಮೂರ್ಛೆ ಹೋಗಿಬಿಟ್ಟ. ಸೋಮ ವ್ಯಾಪಾರಿಯ ಹಣದ ಚೀಲದೊಂದಿಗೆ ಪರಾರಿಯಾದ. ಭಯದಿಂದ ಓಡುವಾಗ ಅವನು ತನ್ನಲ್ಲಿರುವ ಕೋಲನ್ನು ವ್ಯಾಪಾರಿಯ ಬಳಿಯೇ ಬಿಟ್ಟುಹೋದ.

ವ್ಯಾಪಾರಿಗೆ ಸ್ವಲ್ಪ ಸಮಯದ ಅನಂತರ ಎಚ್ಚರವಾಯಿತು. ಅವನ ಸೊಂಟದಲ್ಲಿದ್ದ ನೂರು ಚಿನ್ನದ ನಾಣ್ಯಗಳ ಚೀಲ ಕಾಣೆಯಾಗಿತ್ತು. ತನ್ನ ಪಕ್ಕದಲ್ಲಿದ್ದ ಕೋಲನ್ನು ನೋಡಿ ಅದನ್ನು ಪರೀಕ್ಷಿಸಿದ. ಎರಡೂ ಬದಿಯಲ್ಲಿ ಅದಕ್ಕೆ ಹಾಕಿರುವ ಹಿತ್ತಾಳೆಯ ಹೊದಿಕೆಯಿಂದ ಅದು ಕಿಮ್ಮತ್ತಿನ ಕೋಲಿನಂತೆ ಕಾಣುತ್ತಿತ್ತು. ಇದು ಚಿನ್ನದ ಹಿಡಿಕೆ ಇರುವ ಕೋಲೆಂದು ಯಾರನ್ನಾದರೂ ನಂಬಿಸಿ, ಈ ಕೋಲನ್ನು ಇನ್ನೂರು ಚಿನ್ನದ ನಾಣ್ಯಕ್ಕೆ ಮಾರಿದರೆ ತಾನು ಕಳೆದುಕೊಂಡಿರುವ ನೂರು ನಾಣ್ಯಗಳೊಂದಿಗೆ ಇನ್ನೂ ನೂರು ನಾಣ್ಯಗಳನ್ನು ಹೆಚ್ಚಿಗೆ ಸಂಪಾದಿಸಬಹುದು ಎಂದು ಯೋಚಿಸಿದ.

ವ್ಯಾಪಾರಿಯು ಕೋಲನ್ನು ತೆಗೆದುಕೊಂಡು ಅಕ್ಕಸಾಲಿಗನ ಅಂಗಡಿಗೆ ಹೋದ. ಅಕ್ಕಸಾಲಿಗನಲ್ಲಿ 'ಈ ಕೋಲಿನ ಒಳಗೆ ಬಹಳಷ್ಟು ಬೆಲೆ ಬಾಳುವ ರತ್ನಗಳಿವೆ. ಅದನ್ನು ಮಾರೋಣವೆಂದು ಇಲ್ಲಿಗೆ ಬಂದೆ. ಆದರೆ, ಇದನ್ನು ತೆರೆಯಲು ಬಹಳ ಹೊತ್ತು ಬೇಕು. ನನಗೆ ತುರ್ತು ಕೆಲಸವಿದೆ. ನೀನು ನನಗೆ ಇನ್ನೂರು ಚಿನ್ನದ ನಾಣ್ಯಗಳನ್ನು ಕೊಟ್ಟರೆ, ಇದನ್ನು ನಿನಗೆ ಕೊಡುತ್ತೇನೆ' ಎಂದ.

ಅಕ್ಕಸಾಲಿಗ ವ್ಯಾಪಾರಿಯ ಮಾತು ನಂಬಿ, ಅವನಿಗೆ ಇನ್ನೂರು ಚಿನ್ನದ ನಾಣ್ಯಗಳನ್ನು ಕೊಟ್ಟು ಕೋಲನ್ನು ಕೊಂಡುಕೊಂಡ. ಅಕ್ಕಸಾಲಿಗ ಮತ್ತು ವ್ಯಾಪಾರಿಯ ಮಾತುಗಳನ್ನು ಅಲ್ಲಿಯೇ ಇದ್ದ ಇಬ್ಬರು ಕಳ್ಳರು ಕೇಳಿಸಿಕೊಂಡರು. ಅವರಿಬ್ಬರು ಕತ್ತಲಾದ ಅನಂತರ ಅಕ್ಕಸಾಲಿಗನ ಬಳಿ ಇರುವ ಕೋಲನ್ನು ಕಳ್ಳತನ ಮಾಡಿದರು. ಕಳ್ಳರು ಆ ಕೋಲನ್ನು ಊರ ಹೊರಗೆ ತೆಗೆದುಕೊಂಡು ಹೋದರು. ಮೊದಲೇ ಆ ಕೋಲಿನಲ್ಲಿರುವ ರತ್ನಗಳನ್ನು ಹಂಚಿಕೊಳ್ಳುವ ಬಗ್ಗೆ ಕಿತ್ತಾಡಲಾರಂಭಿಸಿದರು.

ಅದೇ ದಾರಿಯಲ್ಲಿ ಹೋಗುತ್ತಿದ್ದ ರಾಜಭಟರು ಅದನ್ನು ಗಮನಿಸಿ, ಅವರಿಬ್ಬರನ್ನು ರಾಜನ ಬಳಿಗೆ ಕರೆದುಕೊಂಡು ಹೋದರು. ರಾಜನು ಅವರಿಬ್ಬರನ್ನು ವಿಚಾರಿಸಲು, ಕೋಲಿನ ಒಳಗಿರುವ ರತ್ನದ ವಿಷಯವನ್ನು ಹೇಳಿದರು. ರಾಜ ಕಳ್ಳರನ್ನು ಸೆರೆಮನೆಯಲ್ಲಿ ಬಂಧಿಸಿಟ್ಟು, ಕೋಲಿನೊಳಗೆ ಏನಿದೆಯೆಂದು ಹೇಳಿದವರಿಗೆ ಬಹುಮಾನ ಘೋಷಿಸಿ ಡಂಗುರ ಸಾರಿದ. ಅದನ್ನು ಕೇಳಿ ಭಿಕ್ಷುಕ, ಸೋಮ, ವ್ಯಾಪಾರಿ, ಅಕ್ಕಸಾಲಿಗ ಎಲ್ಲರೂ ರಾಜನ ಬಳಿಗೆ ಬಂದರು. ಸೋಮ ಹೇಳಿದ, 'ಅದರಲ್ಲಿ ಚಿನ್ನವಿದೆ' ಎಂದು. ವ್ಯಾಪಾರಿ ಹೇಳಿದ, 'ರತ್ನಗಳಿವೆ' ಎಂದು. ಅಕ್ಕಸಾಲಿಗ, 'ಹೌದು, ರತ್ನಗಳಿವೆ' ಎಂದ. ಭಿಕ್ಷುಕ, 'ಆ ಕೋಲಿನಲ್ಲಿ ಏನೂ ಇಲ್ಲ ಸ್ವಾಮೀ, ಯಾರೋ ಪುಣ್ಯಾತ್ಮರು ಎರಡು ಬದಿಯಲ್ಲಿ ಹಿತ್ತಾಳೆಯ ಹೊದಿಕೆಯನ್ನು ಹಾಕಿಸಿ ಕೊಟ್ಟಿರುವ ಗಟ್ಟಿಯಾದ ಮರದ ಕೋಲು, ಅಷ್ಟೆ' ಎಂದ. ರಾಜ ಭಿಕ್ಷುಕನ ಮಾತನ್ನು ನಂಬಿದ. ಭಿಕ್ಷುಕನ ಕೋಲನ್ನು ಹಣದ ಆಸೆಗಾಗಿ ಅಪಹರಿಸಿದ್ದ ಸೋಮ, ವ್ಯಾಪಾರಿ, ಅಕ್ಕಸಾಲಿಗನಿಂದ ತಲಾ ನೂರು ನಾಣ್ಯಗಳನ್ನು ವಸೂಲಿ ಮಾಡಿಸಿದ ರಾಜ, ಭಿಕ್ಷುಕನಿಗೆ ಆ ಹಣವನ್ನೂ, ಅದರೊಂದಿಗೆ ಅವನ ಕೋಲನ್ನು ಕೊಟ್ಟು ಕಳುಹಿಸಿದ.